

**ಹೆಲ್ತ್**

# ಮಕ್ಕಳಿಗ್ಯಾಕೆ ಆ್ಯಂಟಿಸೈಕೋಟಿಕ್ ಮಾತ್ರೆ?

ದ್ವಿಮುಖ ವ್ಯಕ್ತಿತ್ವ ಹೊಂದಿರುವ 2–5 ವರ್ಷ ವಯಸ್ಸಿನ ಮಕ್ಕಳ ಸಂಖ್ಯೆ ಕಳೆದ ಒಂದು ದಶಕದಲ್ಲಿ ಎರಡು ಪಟ್ಟು ಜಾಸ್ತಿಯಾಗಿದೆ. ಇಂಥ ಮಕ್ಕಳಿಗೆ ಪ್ರಬಲವಾದ ಆ್ಯಂಟಿಸೈಕೋಟಿಕ್ ಮಾತ್ರೆಗಳನ್ನು ಕೊಡುವುದೂ ಹೆಚ್ಚಾಗಿದೆ ಎನ್ನುತ್ತದೆ ಅಧ್ಯಯನ.

ಇಷ್ಟು ಚಿಕ್ಕ ಮಕ್ಕಳಿಗೆ ಪ್ರಬಲವಾದ ಸೈಕಿಯಾಟ್ರಿಕ್ ಔಷಧ ಕೊಡುವುದು ಸರಿಯಲ್ಲ. ಆದರೂ ಇಂತಹ ಪ್ರಕರಣಗಳು ಅಧಿಕವಾಗಿವೆ. 2006ರಲ್ಲಿ ಬೋಸ್ಟನ್‌ನಲ್ಲಿ 4 ವರ್ಷದ ಮಗು ರೆಬೆಕ್ಕಾ ರಿಲೆ ಮನಸ್ಸಿನ ಮೇಲೆ ಕಡಿವಾಣ ಹಾಕುವ ಔಷಧದ ಪ್ರಮಾಣ ಹೆಚ್ಚಾಗಿ ನೀಡಿದ್ದರಿಂದ ಮೃತಪಟ್ಟಿತ್ತು. ರೆಬೆಕ್ಕಾಳ ಪೋಷಕರ ಮೇಲೆ ಕೊಲೆಯ ಆರೋಪ ಹೊರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಅಮೆರಿಕದ ಮಕ್ಕಳ ಮತ್ತು ಹದಿಹರೆಯದವರ ಮಾನಸಿಕ ಅಧ್ಯಯನ ಅಕಾಡೆಮಿ ಪ್ರಕಟಿಸಿದ ಅಂಕಿ– ಅಂಶವನ್ನು ಉಲ್ಲೇಖಿಸುವ ಸಾಧ್ಯತೆಗಳಿವೆ. ಪೋಷಕರು ಬುದ್ಧಿಪೂರ್ವಕವಾಗಿ ರೆಬೆಕ್ಕಾಳಿಗೆ ಹೆಚ್ಚು ಪ್ರಮಾಣದಲ್ಲಿ ಔಷಧ ನೀಡಿದ್ದಾರೆ ಎಂದು ಆರೋಪಿಸಲಾಗಿದೆ. ಈ ಪ್ರಕರಣ ಚಿಕ್ಕ ಮಕ್ಕಳಲ್ಲಿ ದ್ವಿಮುಖ ವ್ಯಕ್ತಿತ್ವವನ್ನು ಪತ್ತೆ ಹಚ್ಚಬಹುದೇ ಹಾಗೂ ಅವರಿಗೆ ಪ್ರಬಲವಾದ ಔಷಧ ನೀಡಬಹುದೇ ಎಂಬ ವಿಷಯದ ಮೇಲೆ ಮತ್ತೆ ಚರ್ಚೆಯನ್ನು ಹುಟ್ಟು ಹಾಕಿದೆ.

### ಮಧುಮೇಹದಿಂದ ಅಲ್ಜೈಮೇರ್?

ಮಧುಮೇಹದಿಂದ ಬಂದ ಚಿತ್ತವೈಕಲ್ಯದಿಂದ ನರಳುವವರಲ್ಲಿ ಕಾಯಿಲೆ ತೀವ್ರ ಸ್ವರೂಪಕ್ಕೆ ಹೋಗಬಹುದು ಎಂಬುದು ಲಂಡನ್ನಿನ ಮನೋವೈದ್ಯೆ ಡಾ.ಲತಾ ವೇಲಾಯುಧನ್ ಅವರ ಅಭಿಪ್ರಾಯ.

ಚಿತ್ತವೈಕಲ್ಯದಿಂದ ನರಳುತ್ತಿರುವ 65 ವರ್ಷಕ್ಕಿಂತ ಹೆಚ್ಚು ವಯಸ್ಸಾದವರ ಮೇಲೆ ಕಳೆದ ನಾಲ್ಕು ವರ್ಷಗಳಿಂದ ಪರೀಕ್ಷೆ ನಡೆಸಿ ಈ ಅಭಿಪ್ರಾಯಕ್ಕೆ ಬರಲಾಗಿದೆ. ಒಟ್ಟು 103 ಮಂದಿಯನ್ನು ಪರೀಕ್ಷೆಗೆ ಒಳಪಡಿಸಲಾಗಿದ್ದು 19 ಮಂದಿ ತೀವ್ರ ಸ್ವರೂಪದ ಮನೋದೌರ್ಬಲ್ಯಕ್ಕೆ ಒಳಗಾಗಿದ್ದು ಕಂಡುಬಂತು. ಮುಂದೆ ಈ ರೋಗಿಗಳು ಅಲ್ಜೈಮೇರ್ ಕಾಯಿಲೆಗೆ ಒಳಗಾಗುವ ಸಾಧ್ಯತೆಯಿದೆ.

ಇವರಲ್ಲಿ ಮಧುಮೇಹವಿದ್ದವರಿಗೆ ಇಲ್ಲದವರಿಗಿಂತ ಈ ಕಾಯಿಲೆ ಬರುವ ಸಂಭವ ಮೂರು ಪಟ್ಟು ಜಾಸ್ತಿ. ಮೆದುಳು ಗ್ಲುಕೋಸ್ ಅನ್ನು ಹೇಗೆ ಬಳಸಬೇಕು ಎಂಬುದನ್ನು ನಿಯಂತ್ರಿಸುವುದು ಇನ್ಸುಲಿನ್. ಹೀಗಾಗಿ ಮಧುಮೇಹ ನಿಯಂತ್ರಣ ಅಗತ್ಯ ಎನ್ನುತ್ತಾರೆ ವೈದ್ಯರು.

### ಸ್ಕೀಜೊಫ್ರೇನಿಯ: ಅಧ್ಯಯನ ವರದಿ ಸುಳ್ಳು

1957ರಲ್ಲಿ ಮಹಾಮಾರಿ ಏಷ್ಯನ್ ಜ್ವರದಿಂದ ಬಳಲಿದವರಿಗೆ ಆ ಅವಧಿಯಲ್ಲಿ ಜನಿಸಿದವರಿಗೆ ಸ್ಕೀಜೊಫ್ರೇನಿಯ ಬರುವ ಸಾಧ್ಯತೆ ಅಧಿಕ ಎನ್ನುವ ಸಂಶೋಧನಾ ವರದಿಯನ್ನು ಅಧ್ಯಯನವೊಂದು ತಳ್ಳಿಹಾಕಿದೆ. ಅಮೆರಿಕ, ಯೂರೋಪ್, ಜಪಾನ್, ಆಸ್ಟ್ರೇಲಿಯಾದಲ್ಲಿ ಅಧ್ಯಯನ ನಡೆಸಿರುವ ಸಂಶೋಧಕರು ಯಾವುದೇ ಗಂಭೀರ ಅಪಾಯವಿಲ್ಲ ಎಂದಿದ್ದಾರೆ.

ಸ್ಕೀಜೊಫ್ರೇನಿಯಾಗೆ ಖಚಿತ ಕಾರಣ ಗೊತ್ತಾಗಿಲ್ಲ. ಆದರೆ ಮೆದುಳಿನ ವಿಕಾಸ ಸರಿಯಾಗಿ ಆಗದಿದ್ದರೆ ಈ ಕಾಯಿಲೆ ಬರುತ್ತದೆ. ಜೊತೆಗೆ ಅನುವಂಶೀಯತೆ, ಪರಿಸರ ಕಾರಣ ಎನ್ನಲಾಗುತ್ತದೆ. ಗರ್ಭಿಣಿಗೆ ಮಹಾಮಾರಿ ಜ್ವರ ಬಂದರೆ ವೈರಸ್ ಭ್ರೂಣದ ಮೆದುಳಿಗೆ ಅಪಾಯ ಒಡ್ಡುತ್ತದೆ ಎಂದು ಶಂಕಿಸಲಾಗಿತ್ತು. 1988ರಲ್ಲಿ ಫಿನ್ಲೆಂಡ್ ವಿಜ್ಞಾನಿಗಳು ನಡೆಸಿದ ಅಧ್ಯಯನವೊಂದು ಈ ನಿರ್ಣಯಕ್ಕೆ ಬಂದಿತ್ತು. ಆದರೆ ಆಗ ನಡೆಸಿದ ಅಧ್ಯಯನದಲ್ಲಿ ಸರಿಯಾದ ಕ್ರಮ ಬಳಸಲಾಗಿಲ್ಲ ಎಂದು ಸ್ಕೀಜೊಫ್ರೇನಿಯ ಬುಲೆಟಿನ್ ಪತ್ರಿಕೆ ಹೇಳಿದೆ.

■ ಸುಧಿ

ಹೊಸ ಬ್ರಾಂಚ್
ಮಲ್ಲೇಶ್ವರಂ ಮತ್ತು ಸುತ್ತ ಮುತ್ತಲಿನ ಗ್ರಾಹಕರಿಗೆ ಒಂದು ಸಿಹಿಸುದ್ದಿ
ನಮ್ಮ ಷೋರೂಂ ಮಲ್ಲೇಶ್ವರಂನಲ್ಲಿಯೂ ಸಹ ತೆರೆದಿದೆ
Please visit for Latest & Exclusive Collections
ಹೈ ಫ್ಯಾನ್ಸಿ ಸಿಂಥೆಟಿಕ್ ಮತ್ತು ಕೈಮಗ್ಗದ ವಿಶೇಷ ಸೀರೆಗಳು ಮತ್ತು ಚೂಡಿದಾರ್‌ಸೆಟ್‌ಗಳಿಗೆ ಭೇಟಿಕೊಡಿ
ಶ್ರೀ ಟೆಕ್ಸ್‌ಟೈಲ್ಸ್
ನಂ. 11, 8ನೇ ಕ್ರಾಸ್, ಮಲ್ಲೇಶ್ವರಂ
ಬೆಂಗಳೂರು – 560 003. ದೂ : 2356 7078
ಎಲ್ಲಾ ಬಗೆಯ ಪರಿಶುದ್ಧ ರೇಷ್ಮೆ ಸೀರೆಗಳ ಆಯ್ಕೆಗೆ ಭೇಟಿ ಕೊಡಿ
ಶ್ರೀ ಸಿಲ್ಕ್ ಅಂಡ್ ಸ್ಯಾರೀಸ್
ನಂ. 11, 8ನೇ ಕ್ರಾಸ್, ಮಲ್ಲೇಶ್ವರಂ
ಬೆಂಗಳೂರು – 560 003. ದೂ : 2356 7079
ಅತ್ಯುತ್ತಮ ಸೂಟಿಂಗ್ಸ್ ಮತ್ತು ಷರ್ಟಿಂಗ್ಸ್ ಬಟ್ಟೆಗಳ ಆಯ್ಕೆಗೆ ಆದರ್ಶ ಷೋ ರೂಂ
ರೇಮಂಡ್, ಓಸಿಎಂ, ಗ್ವಾಲಿಯರ್ ಡಿಗ್‌ಜಾಮ್ ಸೂಟಿಂಗ್ಸ್ ಮತ್ತು ಇತರ ಪ್ರಖ್ಯಾತ ಮಿಲ್ಲುಗಳ ಷರ್ಟಿಂಗ್ಸ್ ಬಟ್ಟೆಗಳ ಆಯ್ಕೆಗೆ
ಶ್ರೀ ಟೆಕ್ಸ್‌ಟೋರಿಯಂ
62–64, ಬಳೇಪೇಟೆ, (ಮಲಬಾರ್ ರೆಸ್ಟೋರೆಂಟ್ ಸಮೀಪ) ಬೆಂಗಳೂರು – 560 053.
ದೂರವಾಣಿ : 22872405
Gangothri
ಅತ್ಯಾಧುನಿಕ ಆಕರ್ಷಕ ಫ್ಯಾನ್ಸಿ ಸೀರೆಗಳ ಆಯ್ಕೆಗೆ
ಶ್ರೀ ಪದ್ಮ ಟೆಕ್ಸ್‌ಟೈಲ್ಸ್
ನಂ. 74, ಶ್ರೀ ಪ್ಲಾಜಾ, ಶಾಪ್ ನಂ. 1, ಎ.ಎಮ್.ಲೇನ್, ಚಿಕ್ಕಪೇಟೆ ಕ್ರಾಸ್
ಬೆಂಗಳೂರು – 560 053. ದೂ : 22342619 ಮೊ : 98865 83996
E-mail : sripadmatextiles@yahoo.in
ನ್ಯಾಯವಾದ ಮತ್ತು ನಿಖರವಾದ ಬೆಲೆಗಳಲ್ಲಿ ದೊರೆಯುತ್ತವೆ.